**ಓ ಎಸ್ ನಂಃ 124/2011** **ಪಿ ಡಬ್ಲೂ - 1**

**ಸಾಕ್ಷಿಯನ್ನು ದಿನಾಂಕಃ 19.04.2025 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ. ಎನ್ ಎಮ್ ಐ ವಕೀಲರಿಂದ

ನಾನು 7ನೇ ತರಗತಿಯ ವರೆಗೆ ಉರ್ದು ಭಾಷೆಯಲ್ಲಿ ಕಲಿತ್ತಿದ್ದೇನೆ. ನಿಪಿ25ನ್ನು ಬರೆಯುವ ಕಾಲಕ್ಕೆ ನಾನು, ನನ್ನ ತಾಯಿ ಮತ್ತು ಫಕರುಸಾಬ ಇದ್ದರು. ಸದರಿ ಫಕರುಸಾಬರವರು ನಮ್ಮ ಚುರುಮರಿ ಬಟ್ಟಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಫಕರುಸಾಬರವರು ಮದ್ಯವ್ಯಸನಿ ಎಂದರೆ ಗೊತ್ತಿಲ್ಲ. ನಿಪಿ25 ಮೂಲ ದಾಖಲೆ ನಮ್ಮಲ್ಲಿ ಇಲ್ಲ ಎಂದರೆ ಸರಿ. ನಿಪಿ25 ಬಿಟ್ಟು ಬೇರೆ ದಾಖಲೆ ಇಲ್ಲ ಎಂದರೆ ಸರಿ. ನಿಪಿ25ರ ಮೇಲೆ ಎಲ್ಲ ವ್ಯವಹಾರ ಮಾಡಿದ್ದೇವೆ ಎಂದರೆ ಸಾಕ್ಷಿಯು ತನ್ನ ತಾಯಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ25 ರ ಮೂಲ ದಾಖಲೆಯನ್ನು ನನ್ನ ತಾಯಿ ಇರುವ ಕಾಲಕ್ಕೆ ಕಳೆದು ಹೋಗಿತ್ತು. ನಂತರ ಮೂಲ ದಾಖಲೆ ಸಿಗಲಿಲ್ಲ. ನಿಪಿ25 ರ ಮೂಲ ದಾಖಲೆ ಕಳೆದು ಹೋದ ಬಗ್ಗೆ ದೂರು ಕೊಟ್ಟಿಲ್ಲ ಮತ್ತು ಪತ್ರಿಕಾ ಪ್ರಕಟಣೆ ತೆಗೆದುಕೊಂಡಿಲ್ಲ. ನಿಪಿ25ರ ಮೊದಲ ಮತ್ತು 2ನೇ ಪುಟದಲ್ಲಿನ ಫಕರುಸಾಬ ರವರ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅವರ ಕೈ ನಡಗುತ್ತಿತ್ತು ಆ ಕಾರಣ ವ್ಯತ್ಯಾಸ ಇದೆ ಎಂದು ನುಡಿಯುತ್ತಾರೆ. ನಿಪಿ25 ರಲ್ಲಿ ಇರುವ ಮುದ್ರೆಯನ್ನು ನಮ್ಮ ವಕೀಲರು ಮತ್ತು ನನ್ನ ತಾಯಿ ಹಾಕಿಸಿರುತ್ತಾರೆ. ಸದರಿ ದಿನ ನಿಪಿ25 ಕ್ಕೆ ನನ್ನ ತಮ್ಮ ಮತ್ತು ಶ್ರೀಕಾಂತ ಕಟಾವಕರ ರವರು ಸಹಿ ಮಾಡಿರುತ್ತಾರೆ. ನಿಪಿ25ರ ಮೂಲ ದಾಖಲೆಯನ್ನು ನನ್ನ ತಾಯಿಗೆ ಫಕರುಸಾಬರವರು ಬರೆದುಕೊಟ್ಟಿದ್ದಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಪಿ25ನ್ನು ವಕೀಲರ ಮುಖಾಂತರ ಬರೆಸಲಾಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ25ನ್ನು ಬರೆದವರ ಸಹಿ ಇಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ25 ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಮೂಲ ದಾಖಲೆಯನ್ನು ಹುಡುವ ಪ್ರಯತ್ನ ನಾನು ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**